**<u>ಸಾಕ್ಷಿಯನ್ನು ದಿನಾಂಕ 22.07.2024 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ 3 ಮತ್ತು 4 ನೇ ಪ್ರತಿವಾದಿಯರ ಪರ ಶ್ರೀ ಪಿಎಸ್ ಬಿ ವಕೀಲರಿಂದಃ</u>**

1. consent deed ಎಂದರೆ ಏನು ಎಂದು ನನಗೆ ಗೊತ್ತಿಲ್ಲ. ಎಂ.ಎನ್ ವೆಂಕಟಶಿವರವರು ಎಲ್ಲಿಯಾದರೂ ಸಹಿ ಮಾಡಿದ್ದಾರಾ ಎಂದು ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸಾಕ್ಷಿ ಹೇಳಿದ್ದೇನೆಂದು ನುಡಿಯುತ್ತಾರೆ. ಎಂ.ಎನ್ ವೆಂಕಟಶಿವರವರು ಒಪ್ಪಿಗೆ ಪತ್ರದಲ್ಲಿ ಸಹಿ ಮಾಡಿದ್ದನ್ನು ಹೊರತು ಪಡಿಸಿ ಬೇರೆ ಎಲ್ಲಿ ಸಹಿ ಮಾಡಿದ್ದಾರೆಂದು ನಾನು ನೋಡಿಲ್ಲ. ಎಂ.ಎನ್ ವೆಂಕಟಶಿವರವರು ಬೆಂಗಳೂರಿನಲ್ಲಿ ವಾಸವಿದ್ದರು ಎಂದರೆ ಸರಿ. ನನಗೂ ಮತ್ತು ಎಂ.ಎನ್ ವೆಂಕಟಶಿವರವರಿಗೂ ಯಾವುದೇ ಒಡನಾಟ ಇರಲಿಲ್ಲ. ಎಂ.ಎನ್ ವೆಂಕಟಶಿವರವರು ಯಾವುದೇ ಒಪ್ಪಿಗೆ ಪತ್ರಕ್ಕೂ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಒಪ್ಪಿಗೆ ಪತ್ರ ಎಷ್ಟು ಪುಟಗಳು ಇವೆಯೆಂದು ನನಗೆ ನೆನಪು ಇಲ್ಲ. ಅ ಒಪ್ಪಿಗೆ ಪತ್ರದಲ್ಲಿ ಎಂ.ಎನ್ ವೆಂಕಟಶಿವ ಎಂಬುವವರದ್ದು ಎಂದು ಹೇಳುವ ಎಷ್ಟು ಸಹಿಗಳು ಇವೆಯೆಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಒಂದು ಸಹಿ ಇದೆ ಎಂದು ನುಡಿಯುತ್ತಾರೆ. ವೆಂಕಟಶಿವರವರು ಒಪ್ಪಿಗೆ ಪತ್ರಕ್ಕೆ ಸಹಿ ಮಾಡದೇ ಇದ್ದರೂ ಸಹಿ ಮಾಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

2. ನಾನು ವಾದಿ, 1 ನೇ ಪ್ರತಿವಾದಿ ಒಂದೇ ಊರಿನ ವಾಸಿಗಳು ಎಂದರೆ ಸರಿ. ನಾವುಗಳೆಲ್ಲರೂ ಸೇರಿಕೊಂಡು ಒಪ್ಪಿಗೆ ಪತ್ರವನ್ನು ಬನಾವಟ್ ಮಾಡಿದ್ದೇವೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ:**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.